4) ಮೆ: ಇಂಡಿಯನ್ ಡಯರಿ ಸ್ಪೆಷಿಯಾಲಿಟೀಸ್ ಲಿ. ಬೆಂಗಳೂರು.

1999-2000ದಲ್ಲಿ ಮೆ:ಇಂಡಿಯನ್ ಡಯರಿ ಸ್ಪೆಷಿಯಾಲಿಟಿಸ್ ಲಿ. ಬೆಂಗಳೂರು ಉದ್ದಿಮೆಯ ಮೇಲೆ ಇನ್ನೊಂದು ಮೊಕದ್ದಮೆಯನ್ನು ಹೂಡಲಾಗಿದೆ.

ಇ) ಯಾವುದೂ ಇಲ್ಲ

ಈ) ಅನ್ವಯಿಸುವುದಿಲ್ಲ

ಒಬ್ಬರು ಮಾನ್ಯಸದಸ್ಯರು: ಇದು ಬಹಳ ಗಂಭೀರವಾದ ಪ್ರಶ್ನೆ ಇದೆ....

ಅಧ್ಯಕ್ಷರು: ನೀವು ಕಳಿಸಿಕೊಡಿ ಎಂದು ಹೇಳಿದಮೇಲೆ ಇನ್ನೇನು? ಇನ್ನೇನು ಗಂಭೀರವಾದ ವಿಷಯ?

(ಗೊಂದಲ)

ಅಧ್ಯಕ್ಷರು: ಅವರು ನೋಡುತ್ತಾರೆ ಬಿಡಿ.

ಪ್ರಕಟಣೆ

ಅಧ್ಯಕ್ಷರು: ದಿನಾಂಕ 13ನೇ ಏಪ್ರಿಲ್ 2000ರಂದು ನಡೆದ ವಿಧಾನಸಭೆ ಕಾರ್ಯಕಲಾಪಗಳ ಸಲಹಾಸಮಿತಿಯ ಸಭೆಯಲ್ಲಿ ವಿಧಾನಸಭೆಯ ಕಾರ್ಯಕಲಾಪಗಳನ್ನು ದಿನಾಂಕ 5ನೇ ಮೇ 2000ರವರೆಗೆ ನಡೆಸಲು ತೀರ್ಮಾನಿಸಲಾಗಿರುತ್ತದೆ. ಈ ಅವಧಿಯಲ್ಲಿ ದಿನಾಂಕ 17, 18 ಮತ್ತು 19ನೇ ಏಪ್ರಿಲ್ 2000 ರಂದು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣೆ ಪ್ರಸ್ತಾವದ ಮೇಲೆ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ ನೀಡಲು ತೀರ್ಮಾನಿಸಲಾಯಿತು. ದಿನಾಂಕ 20 ಏಪ್ರಿಲ್ 2000ರಿಂದ 4ನೇ ಮೇ 2000ವರೆಗೆ ಹತ್ತು ದಿವಸಗಳು ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಅನುದಾನ ಬೇಡಿಕೆಗಳ ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕಲಾಗುವುದು. ದಿನಾಂಕ 4ನೇ ಹಾಗೂ 5ನೇ ಮೇ 2000ರಂದು ಧನವಿನಿಯೋಗ ಮಸೂದೆ ಹಾಗೂ ಇತರ ಶಾಸನ ರಚನಾ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಲಾಗಿರುವುದರಿಂದ ದಿನಾಂಕ 17-4-2000ರಿಂದ 5ನೇ ಮೇ 2000ವರೆಗೆ ಸದನವು ಬೆಳಿಗ್ಗೆ 10ಗಂಟೆಯಿಂದ ಮಧ್ಯಾಹ್ನ 1ಗಂಟೆ ಹಾಗೂ 2ರಿಂದ 6ಗಂಟೆ ವರೆಗೆ ಕಾರ್ಯಕಲಾಪಗಳನ್ನು ನಡೆಸಲಿದೆ. ಇದನ್ನು ಸದನ ಒಪ್ಪಿದೆಯೆಂದು ಭಾವಿಸುತ್ತೇನೆ.